ಬೇರೆ ಹೋಲಿಕೆಯೇ ಇರಲಿಲ್ಲ.

ಇಂತಹ ವಿವಿಧಬಗೆಯ ಮನೋವೇದನೆಯವರನ್ನು ಹತ್ತಿರದಿಂದ ಕಂಡ ಕೇಳಿದ ತಳಮಳಗಳು ಸೇರಿ ನನ್ನ 'ಅಕ್ಕು' ಕತೆಯಾಯಿತು.

## ಮಂಗನಿಂದಲೂ ಮಾದರಿ ಪಾಠ!

ಅಂದ ಹಾಗೆ ನಮಗೆ ಮಂಗನ ಮೂಲಕವೂ ಪಾಠ ಹೇಳುತಿದ್ದ ಕಾಲ ಅದು. ಕೇಳಿ. ಆಗೆಲ್ಲ ಮಂಗನಾಡಿಸುವವರು ಮನೆಮನೆಗೆ ಬರುತಿದ್ದರಷ್ಟೆ? ಹಾಗೆ ನಮ್ಮಲ್ಲಿ ಬರುತಿದ್ದ ಮಂಗನಾಡಿಸುವವ ಮಂಗನನ್ನು ತನ್ನ ಮಗುವೋ ಎಂಬಂತೆ ಅಕರಾಸ್ಥೆಯಿಂದ ಹೆಗಲಿಗೇರಿಸಿಕೊಂಡು ಮನೆ ಹಿಂದಿನ ಅಂಗಳದಲ್ಲಿ ಬಂದು ಕುಳಿತುಕೊಳ್ಳುತಿದ್ದ. ತೋಳಿಲ್ಲದ ಪುಟ್ಟಕೋಟು ತೊಟ್ಟು ಒಮ್ಮೊಮ್ಮೆ ಚಡ್ಡಿಯನ್ನೂ ತೊಟ್ಟು ಚಂಚಲತೆಯೇ ಮೈವೆತ್ತಂತೆ ಮಿಕಿಮಿಕಿ ನೋಡುತ್ತ ಇರುವ ಅದನ್ನು ನೋಡುವುದೆ ಒಂದು ದೊಡ್ಡ ಮುದ. ಸೂತ್ರಧಾರಿ ಏನಂತಾನೆ ಎಂಬುದನ್ನೂ ಒಳಗಿಂದ ಏನು ತಿನ್ನಲು ಬರುತ್ತದೆ ಎಂಬುದನ್ನೂ ಒಮ್ಮೆಗೇ ಕಾದಂತೆ ಕಾಣುವ ಮಂಗವದು. ಎಲ್ಲರೂ ಹೊರಬಂದು 'ಸರಿ ಸುರುಮಾಡು' ಎಂದದ್ದೇ, ಮಂಗನಾಡಿಸುವವ ಕೆಲವಾರು ಆಟಗಳನ್ನು ಅದರಿಂದ ಮಾಡಿಸಿ ಕಡೆಯದಾಗಿ 'ಮುಂಚಿನ್ ಮದ್ಮಗ್ಳ್ ಮಂಟ್ಪಕ್ಕ್ ಹ್ವಾಪ್ದ್ ಹ್ಯಾಂಗೇ?' ಅಂತ ಕೇಳುತಿದ್ದ. ಆತ ಕೇಳಿದ್ದೇ ಸೈ ಆ ಕೋತಿ ತಲೆ ಬಗ್ಗಿಸಿಕೊಂಡು ವಿನಯಾತಿರೇಕದಿಂದ ನಿಧಾನವಾಗಿ ನಡೆದುಕೊಂಡು ಬಂದು ನಿಲ್ಲುತಿತ್ತು. 'ಇವತ್ತಿನ್ ಮದ್ಮಗ್ಳ್ ಮಂಟ್ಪಕ್ಕ್ ಬಪ್ದ್ ಹ್ಯಾಂಗೇ?' ಪ್ರಶ್ನೆ ಬರುವುದೇ ತಡ, ಹಾರಿ ಹಾರಿಕೊಂಡು ಒಯ್ಯಾರದಿಂದ ಅತ್ತ ಇತ್ತ ನೋಡುತ್ತ 'ಮಂಗನಂತೆ' ಬರುತಿತ್ತು. ಹಾಗೆಯೇ ಮಂಟಪದಲ್ಲಿ ಹಳೆಯ ವಧು ಕುಳಿತುಕೊಳ್ಳುವುದು ಹೇಗೆ ಅಂತ ಕೇಳಿದರೆ ತಲೆತಗ್ಗಿಸಿ ಕುಳಿತುಕೊಂಡು, ಇವತ್ತಿನ ಮದುಮಗಳು? ಎಂದು ಕೇಳುವುದನ್ನೇ ಕಾದಂತೆ, ಹೇಳಿದ್ದೇ ಸೈ, ತಕ್ಷಣ ತಲೆ ಸೆಟೆದು ಎತ್ತಿ ಅತ್ತಇತ್ತ ನೋಡುತ್ತ ಕುಳಿತುಕೊಳ್ಳುತಿತ್ತು. ಆಗ ಅಂಗಳವೋ ನಗೆಯ ಕಡಲೇ. ಬೇರೆ ಉಪಮೆಯೇ ಇಲ್ಲ. ಎರಡನೆಯ ಮಾದರಿಯ ನಗೆಯಂತೂ ಕಟ್ಟೆಯಿಲ್ಲದಂತೆ ಒಡೆಯುತಿತ್ತು. ಮಂಗನಾಟದ ಮೂಲಕವೂ ಅರಿವಿಲ್ಲದಂತೆ ಒಂದು ಪಥ್ಯ ಒದಗುವ ಈ ಪರಿ ನನಗೆ ಅಂದಾಜಾಗಿದ್ದೇ ಬಹಳ ಬಹಳ ತಡವಾಗಿ.

ಆತ ನಮಗೆ ಬರೀ ಮಂಗನಾಡಿಸುವವ ಮಾತ್ರವೆ? ಮನೆಮಂದಿಗೆಲ್ಲ ಆಪ್ತನೂ ಆಗಿದ್ದ. ಆತನಷ್ಟೇ ಅಲ್ಲ. ಆ ಮಂಗವೂ! ಆಟ ಮುಗಿದ ಮೇಲೆ ಊರಮೇಲಿನ ಮಾತುಕತೆ, ಎರಡು ಸುಖದುಃಖವಾಡಿ, ತಿಂಡಿ ತಿನಿಸು ಬಾಯಾರಿಕೆ ಮುಗಿಸಿದ ಮೆಲೆ ಅವನೂ ಅವನ ಮಂಗನೂ ಹೊರಡಲು ಏಳುತಿದ್ದರು. ಬೇಕೆಂದರೂ ಸಿಗದ ಇಂಥ ಅಮೂಲ್ಯ ಕ್ಷಣಗಳು ನನ್ನ ಭಾವಕೋಶದಲ್ಲಿ ಸೇರಿಹೋಗಿವೆ. ಒಮ್ಮೊಮ್ಮೆ ಆ ಕೋಶ ತಾನಾಗಿಯೇ ಕದ ತೆರೆದು ಆ ಅವರೆಲ್ಲ ಎಲ್ಲಿ? ಎಂದು ಮನಸಿನಂಗಳದಲ್ಲಿ ಅರಸುವುದಿದೆ.

ಲೇಖಕಿಯಾಗಿ ಬೆಳೆಯಲು ನನಗೆ ಪುಷ್ಟಿ ನೀಡಿದ ಅಂಶಗಳಲ್ಲಿ ಇಂಥ ಅನೇಕವು ಸೇರಿವೆ ಎಂದು ಹೇಳಬೇಕಿಲ್ಲವಷ್ಟೆ?

## ನೀನಲ್ಲದೆನೀನಲ್ಲದೆ ನಾನಲ್ಲಾ ಅಲ್ಲಾ

ಪ್ರಾಥಮಿಕ ಮತ್ತು ಹೈಸ್ಕೂಲಿನ ಅನೇಕಾನೇಕ ಮತ್ತು ವೈವಿಧ್ಯಮಯ ನೆನಪುಗಳೋ ಹೇಳಿದಷ್ಟೂ ಉಂಟು. ಸ್ಥಳಾಭಾವದಿಂದಾಗಿ ಕುಂದಾಪುರ ಬೋರ್ಡ್ ಹೈಸ್ಕೂಲಿನ (ಈಗಿನ